# ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ
# PILIKULA DEVELOPMENT AUTHORITY

ಆಡಳಿತ ಕಚೇರಿ: ಮೂಡುಶೆಡ್ಡೆ, ಮಂಗಳೂರು-575028, ದೂರವಾಣಿ: 0824-2263565, ಇ-ಮೇಲ್:pilikula96@gmail.com, ವೆಬ್‌ಸೈಟ್: www.pilikula.com

Administrative Office: Moodushedde, Mangaluru-575028, Ph: 0824-2263565, e-mail:pilikula96@gmail.com, website: www.pilikula.com


ನಂ.ಪಿಡಿಎ(1).ಸಿಆರ್:215/ಪಿಕ್‌ಅಪ್ ಟೆಂಡರ್/2021-22 ದಿ:21.2.2022

**:: ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ::**

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಉಪಯೋಗಕ್ಕೆ 2 ವರ್ಷಗಳ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಒಂದು ಬೊಲೆರೋ ಪಿಕ್ ಅಪ್ ವಾಹನವನ್ನು ಬಾಡಿಗೆ ನೀಡಲು ಅರ್ಹ ಮಾಲೀಕರಿಂದ ಮತ್ತು ಟ್ರಾವೆಲ್ ಏಜೆನ್ಸಿಯವರಿಂದ ಪಾರದರ್ಶಕ ಅಧಿನಿಯಮದಂತೆ ದ್ವಿಲಕೋಟೆ ಪದ್ದತಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳವರು ಪ್ರತಿ ಮಾಸಿಕ ಬಾಡಿಗೆ ದರ (ಚಾಲಕನ ಸಂಬಳ, ಇಂಧನ, ದುರಸ್ಥಿ ವೆಚ್ಚ ಸೇರಿಸಿ ಹಾಗೂ ಇತರೆ ವೆಚ್ಚ ಒಳಗೊಂಡಂತೆ) ವನ್ನು ಸಲ್ಲಿಸುವುದು.

| | | |
|---|---|---|
| 1 | ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ | 14.03.2022 ಅಪರಾಹ್ನ 5.30 |
| 2 | ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ | 16.03.2022 ಅಪರಾಹ್ನ 4.00 |
| 3 | ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ | 17.03.2022 ಅಪರಾಹ್ನ 4.00 |

ಹೆಚ್ಚಿನ ವಿವರಗಳನ್ನು www.eproc.karnataka.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಆಡಳಿತ ಕಚೇರಿಯನ್ನು(0824-2263565) ಸಂಪರ್ಕಿಸಬಹುದಾಗಿದೆ.

ಆಯುಕ್ತರು,
ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ
ಮಂಗಳೂರು

**ಪ್ರತಿಯನ್ನು:**

1. ನಿರ್ದೇಶಕರು, ಪಿಲಿಕುಳ ಜೈವಿಕ ಉದ್ಯಾನವನ - ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಿದೆ.
3. ಕಛೇರಿ ಪ್ರತಿ.

**ಹೊರಗುತ್ತಿಗೆ ಆಧಾರದ ಮೇಲೆ ಬಾಡಿಗೆ ವಾಹನ ಪಡೆಯಲು ವಿಧಿಸಿರುವ**

**:: ಟೆಂಡರ್ ನಿಬಂಧನೆಗಳು ::**

| | |
|---|---|
| 01 | ಟೆಂಡರ್ ಸಲ್ಲಿಸುವವರು ಇತ್ತಿಚೇನ ಚುನಾವಣಾ ಗುರುತಿನ ಪತ್ರ/ಆಧಾರ್ ಕಾರ್ಡ್ ದಾಖಲಾತಿ ಲಗತ್ತಿಸುವುದು. ಸ್ಥಳೀಯರಿಗೆ ಮೊದಲ ಆದ್ಯತೆ ನೀಡಲಾಗುವುದು. |
| 02 | ಟೆಂಡರ್ ಅರ್ಜಿ ಸಲ್ಲಿಸುವಾಗ ಬಾಡಿಗೆ ಆಧಾರದ ಮೇಲೆ ವಾಹನ ನೀಡುವುದಕ್ಕೆ ಟೆಂಡರ್ ಅರ್ಜಿದಾರರು **ರೂ.26,400/- (ರೂ. ಇಪ್ಪತ್ತಾರು ಸಾವಿರದ ನಾನ್ನೂರು ಮಾತ್ರ)** ಗಳ ಇ.ಎಂ.ಡಿಯನ್ನು ಹಣವನ್ನು **ಇ-ಪ್ರೋಕ್ಯೂರ್‌ಮೆಂಟ್**ಗೆ ನಿಯಮಾನುಸಾರ ಪಾವತಿಸುವುದು. |
| 03 | ಟೆಂಡರ್‌ದಾರರು ಪಾನ್ ಕಾರ್ಡ್/ಜಿ.ಎಸ್.ಟಿ. ಕಡ್ಡಾಯವಾಗಿ ಹೊಂದಿರಬೇಕು. |
| 04 | ಗುತ್ತಿಗೆ ವಾಹನವನ್ನು ಪೂರ್ತಿ ಸ0ಸ್ಥೆಯ ಅಧೀನದ ಉಪಯೋಗಕ್ಕೆ ಪೂರ್ವಾಹ್ನ 7.00 ಗಂಟೆಯಿಂದ ಸಂಜೆ 6.30 ರವರೆಗೆ ಸೇವೆಗೆ ವಹಿಸಿಕೊಡತಕ್ಕದ್ದು. ತಡ ರಾತ್ರಿಯಾದರೂ ತುರ್ತಾಗಿ ಪ್ರಾಣಿಗಳ ಸಂರಕ್ಷಣೆಗೆ, ಸಿಬ್ಬಂದಿಗಳನ್ನು ಸಾಗಿಸಲು ವಾಹನ ಸಿದ್ಧವಾಗಿರಬೇಕು. ಪಿಕ್‌ಅಪ್ ವಾಹನವನ್ನು ಪಿಲಿಕುಳ ಜೈವಿಕ ಉದ್ಯಾನವನ ಹಾಗೂ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಇತರೆ ಕೆಲಸಗಳಿಗೆ ಸದ್ರಿ ವಿಭಾಗಕ್ಕೆ ಸಂಬಂಧಿಸಿದ ಅಧಿಕಾರಿಗಳ ಸೂಚನೆಯಂತೆ ಕೆಲಸ ನಿರ್ವಹಿಸಬೇಕು. |
| 05 | ಟೆಂಡರ್‌ದಾರರಿಗೆ ಯಾವುದೇ ಕಾರಣದಿಂದ ಮುಂಗಡ ಹಣ ನೀಡಲಾಗುವುದಿಲ್ಲ. |
| 06 | ವಾಹನ ಚಾಲಕರು ತಪ್ಪದೇ ಸಮವಸ್ತ್ರವನ್ನು ಧರಿಸತಕ್ಕದ್ದು. ವಾಹನ ಚಾಲಕರು ಚಾಲನಾ ಪರವಾನಗಿ ಹೊಂದಿರತಕ್ಕದ್ದು. |
| 07 | ವಾಹನದ ದಾಖಲಾತಿಗಳನ್ನು ಕ್ರಮಬದ್ಧವಾಗಿಟ್ಟಿರಬೇಕು. ವಾಹನದ ಹೊಗೆ ನಿಯಂತ್ರಣ ಪ್ರಮಾಣ ಪತ್ರ, ನೊಂದಣಿ ಪ್ರಮಾಣ ಪತ್ರ (ಆರ್.ಸಿ.ಪುಸ್ತಕ), ತೆರಿಗೆ ಪಾವತಿ, ವಿಮೆ ಪಾವತಿ ಅವಧಿಗೆ ಚಾಲ್ತಿಯಲ್ಲಿರಬೇಕು ಹಾಗೂ ಟೋಲ್ ಶುಲ್ಕು ಇತರೆ ವೆಚ್ಚವನ್ನು ತಾವೆ ಕಟ್ಟಿಕೊಳ್ಳಬೇಕು. |
| 08 | ಗುತ್ತಿಗೆ ಆಧಾರದ ಮೇಲೆ ನೀಡಿರುವ ವಾಹನದ ಇಂಧನ, ದುರಸ್ತಿ ವೆಚ್ಚ, ಚಾಲಕರ ವೇತನ, ಟೋಲ್ ಫೀ, ಇನ್ಸುರೆನ್ಸ್, ತೆರಿಗೆ, ಹೊರ ರಾಜ್ಯಕ್ಕೆ ಪ್ರಯಾಣಿಸುವಾಗ ಪಾವತಿಸಬೇಕಾಗಿದ್ದ ತೆರಿಗೆ ಇತ್ಯಾದಿಗಳನ್ನು ಪೂರ್ತಿ ಮಾಲಿಕರ ವತಿಯಿ0ದಲೇ ಭರಿಸತಕ್ಕದ್ದು. ಯಾವುದೇ ರೀತಿಯ ವೆಚ್ಚವನ್ನು ಗುತ್ತಿಗೆಗೆ ಪಡಕೊ0ಡವರಿ0ದ ನೀಡಲಾಗುವುದಿಲ್ಲ. |
| 09 | ಪ್ರತಿ ಮಾಹೆ ಅಂತ್ಯಗೊಂಡ ನಂತರ ಲಾಗ್ ಬುಕ್‌ನ ಪ್ರತಿ, ಬಿಲ್ಲನ್ನು ಸಲ್ಲಿಸಿದ ನಂತರ ಹಣ ಸಂದಾಯ ಮಾಡಲಾಗುವುದು. |
| 10 | ಒಂದು ವೇಳೆ ತಿಂಗಳ ಮಧ್ಯದಲ್ಲಿ ವಾಹನವನ್ನು ಬಾಡಿಗೆಗೆ ಬಿಡದೆ ವಾಹನವನ್ನು ವಾಪಸ್ಸು ಪಡೆದ ಪಕ್ಷದಲ್ಲಿ ಆ ಮಾಹೆಯ ಬಾಡಿಗೆಯನ್ನು ಪಾವತಿಸಲು ಬರುವುದಿಲ್ಲ. |
| 11 | ಮಾಸಿಕ ಬಿಲ್ಲಿನ ಮೊತ್ತಕ್ಕೆ ನಿಯಾಮಾನುಸಾರ ಆದಾಯ ತೆರಿಗೆ/ಜಿ.ಎಸ್.ಟಿ ಹಾಗೂ ಇತರೆ ತೆರಿಗೆಗಳನ್ನು ಪಾವತಿಸಲು ಬದ್ದರಾಗಿರಬೇಕು. |
| 12 | ವಾಹನ ಮಾಲೀಕರು ಮತ್ತು ಚಾಲಕರು ಸ್ಥಳೀಯರಾಗಿರಬೇಕು ಹಾಗೂ ಒಂದೇ ವಾಹನವನ್ನು ಒದಗಿಸಬೇಕು. ಕರಾರು ಪ್ರಕಾರ ಒಂದು ಸಾರಿ ವಾಹನವನ್ನು ಇಲಾಖೆಗೆ ನೀಡಿದ ಮೇಲೆ ಯಾವುದೇ ಕಾರಣದಿಂದ ಇತರೆಯವರಿಗೆ ಬಾಡಿಗೆಗೆ ವಾಹನವನ್ನು ಉಪಯೋಗಿಸಲು ಬೇರೆಯವರಿಗೆ ನೀಡಲು ಅವಕಾಶಗಳಿರುವುದಿಲ್ಲ. |
| 13 | ಈ ಗುತ್ತಿಗೆಯು ಟೆಂಡರ್ ಅ0ಗೀಕರಿಸಿದ ದಿನಾ0ಕದಿ0ದ 2 ವರ್ಷ ಅಥವಾ ಈ ಆದೇಶವನ್ನು ರದ್ದುಪಡಿಸಿದ ದಿವಸ ಯಾವುದು ಮೊದಲು ಬರುವುದು ಅಲ್ಲಿಯವರೆಗೆ ಇರುತ್ತದೆ. ಅಗತ್ಯವೆ0ದು ಕ0ಡು ಬ0ದಲ್ಲಿ ಹಾಗೂ ವಾಹನದ ಸೇವೆಯು ತೃಪ್ತಿಕರವಾದಲ್ಲಿ ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರ ವಿವೇಚನೆಯಲ್ಲಿ ಮು0ದುವರಿಸಲು ಅವಕಾಶವಿರುತ್ತದೆ. ಆದರೆ, ಗುತ್ತಿಗೆಯನ್ನು ಮು0ದುವರಿಸಲು ಪ್ರೇರಣೆ ನೀಡಲು ಗುತ್ತಿಗೆದಾರರಿಗೆ ಅವಕಾಶವಿರುವುದಿಲ್ಲ. |
| 14 | ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ತೀರ್ಮಾನವೇ ಅಂತಿಮವಾದುದ್ದು ಹಾಗೂ ಅವರಿಗೆ ಎಲ್ಲಾ ಹಕ್ಕುಗಳು ಸೇರಿವೆ. |
| 15 | ವಾಹನವನ್ನು ಕನಿಷ್ಠ ಒ0ದು ತಿ0ಗಳಿಗೆ 2500 ಕಿ.ಮೀ. ಚಲಾಯಿಸಲು ದರವನ್ನು ನಮೂದಿಸಬೇಕು. 2500 ಕಿ.ಮೀ. ಕ್ಕಿ0ತ ಮೀರಿ ಚಲಾಯಿಸಿದಲ್ಲಿ ಹೆಚ್ಚಿಗೆ ಚಲಾಯಿಸಿದ ದೂರಕ್ಕೆ (ಕಿ.ಮೀ. 1 ಕ್ಕೆ) ನೀಡಬೇಕಾದ ದರವನ್ನು ಕೂಡಾ ನಮೂದಿಸಬೇಕು. |

| | |
|---|---|
| 16 | ವಾಹನದ ನಂಬರ್ ಪ್ಲೇಟ್ ಹಳದಿ ಬಣ್ಣದಿಂದ ಹೊಂದಿರಬೇಕು. ಯಾವುದೇ ಕಾರಣಕ್ಕೂ ಬಿಳಿ ಬಣ್ಣದ ನಂಬರ್ ಪ್ಲೇಟನ್ನು ಉಪಯೋಗಿಸವಂತಿಲ್ಲ. |
| 17 | ವಾಹನವನ್ನು ದುರಸ್ತಿಗೆ ಅಥವಾ ಇನ್ನಿತರ 0ಯಾವುದಾದರೂ ಕೆಲಸಗಳಿಗೆ ಮಾಲಿಕರ ವತಿಯಿ0ದ ನಿಲ್ಲಿಸಿದಲ್ಲಿ 0ಯಾವುದೇ ವಿಳ0ಬವಿಲ್ಲದೆ ತತ್ಸಮಾನವಾದ ಸುಸ್ಥಿತಿ0ಯಲ್ಲಿರುವ ಬದಲಿ ವಾಹನವನ್ನು ತಕ್ಷಣ ಒದಗಿಸಬೇಕಾಗುತ್ತದೆ. |
| 18 | ಈ ಕಛೇರಿಯಿಂದ ಆದೇಶ ನೀಡುವ ತಕ್ಷಣದಿಂದಲೇ ನಿಮ್ಮ ವಾಹನವನ್ನು ಬಾಡಿಗೆ ಆಧಾರದ ಮೇಲೆ ಪಡೆಯಲಾಗುವುದು. |
| 19 | ದಿ:1.1.2018ರ ನಂತರ ನೋಂದಣಿಯಾದ ಮಾದರಿಯ (MODEL) ಬೊಲೆರೋ ಪಿಕ್ ಅಪ್ ವಾಹನಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು. |
| 20 | ವಾಹನದ ಗೈರು ಹಾಜರಿ ಅವಧಿ0ಯಲ್ಲಿ ಸ0ಸ್ಥೆಯಿ0ದ ನಿರ್ವಹಿಸಬೇಕಾದ ಕೆಲಸಗಳಿಗೆ ಬದಲಿ ವಾಹನವನ್ನು ಮಾಲಿಕರು ನೀಡದೇ ಇದ್ದು ಸಂಸ್ಥೆಯ ವತಿಯಿಂದ ತೆಗೆದುಕೊಂಡಲ್ಲಿ ತಗಲಿದ ನಿಜವಾದ ಬಾಡಿಗೆ0ಯನ್ನು ಗುತ್ತಿಗೆದಾರರಿ0ದ ವಸೂಲು ಮಾಡಲಾಗುವುದು ಅಥವಾ ಅವರ ಬಿಲ್ಲಿನಿಂದ ಕಡಿತಗೊಳಿಸಲಾಗುವುದು. ಈ ರೀತಿ 1–2 ದಿವಸಗಳಿಗಿ0ತ ಹೆಚ್ಚಿಗೆ ವಾಹನವನ್ನು ಒದಗಿಸಲು ವಿಫಲರಾದಲ್ಲಿ 0ಯಾವುದೇ ಕಾರಣ ನೀಡದೆ ಗುತ್ತಿಗೆದಾರರ ಹೊಣೆಗಾರಿಕೆ0ಯಲ್ಲಿ ಗುತ್ತಿಗೆ0ಯನ್ನು ರದ್ದುಪಡಿಸಲಾಗುವುದು. |
| 21 | ಅರ್ಜಿ ಸಲ್ಲಿಸುವವರು ಯಾವುದೇ ಕ್ರಿಮಿನಲ್ ಕೇಸುಗಳಲ್ಲಿ ದಾಖಲಾಗದಿರುವ ಬಗ್ಗೆ ಮತ್ತು ಸಮಾಜ ವಿದ್ರೋಹ ಕೆಲಸಗಳಲ್ಲಿ ಭಾಗವಹಿಸದಿರುವ ಬಗ್ಗೆ ರೂ. 20/- ರ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರೆದು ಕೊಡಬೇಕು. 0ಯಾವುದೇ ದಾವೆಗಳಿಗೆ ಒಳಪಟ್ಟ ವಾಹನವನ್ನು ನೀಡಲು ಅವಕಾಶವಿರುವುದಿಲ್ಲ. |
| 22 | ವಾಹನದ ಸೇವೆಯು ಅತೃಪ್ತಿಕರವಾದಲ್ಲಿ ಯಾವುದೇ ಕಾರಣ ನೀಡದೆ ಆದೇಶವನ್ನು ರದ್ದುಗೊಳಿಸಿ, ಬದಲಿ ವ್ಯವಸ್ಥೆ ಮಾಡಿಕೊಳ್ಳಲಾಗುವುದು ಹಾಗೂ ಇ.ಎಂ.ಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. |
| 23 | ಕಚೇರಿಯಿಂದ ವಾಹನದ ಉಪಯೋಗದ ಬಗ್ಗೆ ಕಾಲಕಾಲಕ್ಕೆ ನೀಡಲಾಗುವ ಸೂಚನೆಗಳನ್ನು ಪಾಲಿಸಬೇಕು ಹಾಗೂ ಕಚೇರಿಯ ಪೂರ್ಣ ಬಳಕೆಗೆ ವಾಹನವು ಚಾಲಕರೊಂದಿಗೆ ಲಭ್ಯವಾಗಬೇಕು. |
| 24 | ಯಾವುದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಎಲ್ಲಾ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸುವ ಅಧಿಕಾರವನ್ನು ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರು ಹೊಂದಿರುತ್ತಾರೆ. |
| 25 | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮಗಳು 2000 ರನ್ವಯ ಟೆಂಡರ್ ಅರ್ಜಿಯನ್ನು ದಿನಾಂಕ:14.03.2022 ರ ಸಂಜೆ:05-30 ಗಂಟೆಯೊಳಗೆ **www.eproc.karnataka.gov.in** ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವುದು. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:16.03.2022ರಂದು ಸಂಜೆ:04.00 ಗಂಟೆಗೆ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ 17.03.2022 ಸಂಜೆ 04.00 ಗಂಟೆಗೆ. |
| 26 | ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು. |
| 27 | ಅಂಗೀಕೃತ ಟೆಂಡರ್‌ದಾರರು ಆದೇಶ ಸ್ವೀಕರಿಸಿದ 15 ದಿವಸಗಳೊಳಗಾಗಿ ರೂ.100=00ಗಳ ಛಾಪಾ ಕಾಗದವನ್ನು ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರಿಗೆ ಸಲ್ಲಿಸಿ ಟೆಂಡರ್ ನಿಬಂಧನೆಗಳನ್ನು ಒಪ್ಪಿ ಸಾಕ್ಷಿದರರ ಸಮ್ಮುಖದಲ್ಲಿ ಕರಾರು ನಿರ್ವಹಿಸಿಕೊಳ್ಳಬೇಕು. |
| 28 | ಅಂಗೀಕೃತ ಟೆಂಡರ್‌ರುದಾರರು ಒಟ್ಟು ಟೆಂಡರ್ ದರದ ಮೇಲೆ ಶೇ.5 ರಷ್ಟು ಮೊತ್ತವನ್ನು ಭದ್ರತ ಠೇವಣಿಯನ್ನಾಗಿ ರಾಷ್ಟ್ರೀಕೃತ ಬ್ಯಾಂಕಿನಿಂದ ತೆಗೆದ ಡಿ.ಡಿ, ಅಥವಾ ಬ್ಯಾಂಕ್ ಗ್ಯಾರಂಟಿಯನ್ನು ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರ ಹೆಸರಿಗೆ ತೆಗೆದು ಕಛೇರಿಗೆ ಸಲ್ಲಿಸತಕ್ಕದ್ದು. ಭದ್ರತಾ ಠೇವಣಿಗೆ ಯಾವುದೇ, ಬಡ್ಡಿ ನೀಡಲಾಗುವುದಿಲ್ಲ. |

ಆಯುಕ್ತರು,
ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ
ಮಂಗಳೂರು

## :: ಟೆಂಡರ್ ಅರ್ಜಿ ::

**ಫೋಟೋ**

ಆಯುಕ್ತರು,
ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ
ಮಂಗಳೂರು

## :: ತಾಂತ್ರಿಕ ಬಿಡ್ ::

ಟೆಂಡರುದಾರನಾದ ನಾನು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ಹೊರಗುತ್ತಿಗೆ ಆಧಾರದಲ್ಲಿ ಬೊಲೆರೋ ಪಿಕ್ ಅಪ್ ವಾಹನವನ್ನು ಬಾಡಿಗೆಗಾಗಿ ನೀಡಲು ಟೆಂಡರ್ ಅರ್ಜಿಯನ್ನು ಸಲ್ಲಿಸಿರುತ್ತೇನೆ.

| | | |
|---|---|---|
| **1** | ಟೆಂಡರ್ ಅರ್ಜಿ ಸಲ್ಲಿಸುವವರ ಹೆಸರು ಮತ್ತು ಅಂಚೆ ವಿಳಾಸ ದೂರವಾಣಿ ಸಂಖ್ಯೆ | |
| **2** | ಅರ್ಜಿದಾರರು ಇ.ಎಂ.ಡಿಯನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ಲಗತ್ತಿಸಿದೆಯೇ? ಹಾಗಿದ್ದರೆ ಡಿ.ಡಿ.ಸಂಖ್ಯೆ ದಿನಾಂಕ ಮತ್ತು ಬ್ಯಾಂಕಿನ ಹೆಸರು ನಮೂದಿಸಬೇಕು. | **1.**ಇ.ಎಂ.ಡಿ ರೂ:<br>**2.**ಡಿ.ಡಿ.ಸಂ:<br>**3.**ದಿನಾಂಕ:<br>**4.**ಬ್ಯಾಂಕಿನ ಹೆಸರು: |
| **3** | ವಾಸಸ್ಥಳ ಪ್ರಮಾಣ ಪತ್ರ/ಚುಣಾವಣಾ ಗುರುತಿನ ಪತ್ರ/ ಪಡಿತರ ಚೀಟಿ ಲಗತ್ತಿಸಬೇಕು. | |
| **4** | ಪಾನ್ ಕಾರ್ಡ್ ಲಗತ್ತಿಸಲಾಗಿದೆಯೇ ? | |
| **5** | ವಾಹನದ ನೊಂದಣಿ ಸಂಖ್ಯೆ & ಮಾಲೀಕರ ಹೆಸರು & ವಿಳಾಸ | |
| **6** | ವಾಹನದ ಹೊಗೆ ನಿಯಂತ್ರಣ ಪ್ರಮಾಣ ಪತ್ರ ಚಾಲ್ತಿಯಲ್ಲಿರುವುದು. | |
| **7** | ತೆರಿಗೆ ಪಾವತಿ ಪತ್ರ ಚಾಲ್ತಿಯಲ್ಲಿರುವುದು. | |
| **8** | ವಿಮೆ ಪಾವತಿ ಪತ್ರ ಚಾಲ್ತಿಯಲ್ಲಿರುವುದು. | |
| **9** | ಮುಚ್ಚಳಿಕೆ ಪತ್ರಗಳು ಲಗತ್ತಿಸಲಾಗಿದೆಯೇ?<br>**1.** ಕಪ್ಪು ಪಟ್ಟಿಗೆ ಸೇರದಿರುವಬಗ್ಗೆ.<br>**2.** ಕ್ರಿಮಿನಲ್ ಕೇಸ್ ಹಾಗೂ ಸಮಾಜ ವಿದ್ರೋಹಗಳಲ್ಲಿ ಬಾಗಿಯಾಗಿರುವುದಿಲ್ಲ ಎಂಬ ಬಗ್ಗೆ ರೂ.**20=00**ಗಳ ಛಾಪಾಕಾಗದದಲ್ಲಿ ಮುಚ್ಚಳಿಕೆ ಪತ್ರ ಲಗತ್ತಿಸಿದೆಯೇ? | |
| **10** | ಕಾರಿನ ಹೆಸರು ಮತ್ತು ಮಾಡಲ್ ನಮೂದಿಸುವುದು | |

ಟೆಂಡರ್ ಪ್ರಕಟಣೆಯಲ್ಲಿ ತಿಳಿಸಿರುವ ಎಲ್ಲಾ ನಿಬಂಧನೆಗಳಿಗೆ ಒಳಪಟ್ಟು ಟೆಂಡರ್ ಅರ್ಜಿ ಸಲ್ಲಿಸಿರುತ್ತೇನೆ. ಟೆಂಡರನ್ನು ಒಪ್ಪುವುದು/ತಿರಸ್ಕರಿಸುವುದು ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರಿಗೆ ಬಿಟ್ಟಿದ್ದು ಎಂಬುದನ್ನು ತಿಳಿದುಕೊಂಡಿರುತ್ತೇನೆ ಹಾಗೂ ಪ್ರಾಧಿಕಾರದ ಅಂತಿಮ ತಿರ್ಮಾನಕ್ಕೆ ಬದ್ದನಾಗಿರುತ್ತೇನೆ.

**ಸ್ಥಳ:**
**ದಿನಾಂಕ:** **ಅರ್ಜಿದಾರರ ಸಹಿ.**

## :: ಆರ್ಥಿಕ ಬಿಡ್ ::

| | | |
|---|---|---|
| 01. | ಅರ್ಜಿದಾರರ/ಮಾಲೀಕರ ಹೆಸರು & ವಿಳಾಸ ನೊಂದಣಿ ಸಂಖ್ಯೆ | |
| 02. | ಮಾಸಿಕ 2500 ಕಿ.ಮೀ.ಗೆ ಬಾಡಿಗೆ ಮೊತ್ತವನ್ನು ನಮೂದಿಸುವುದು. (ಇಂಧನ, ದುರಸ್ಥಿ, ನಿಲುಗಡೆ ವೆಚ್ಚ ಎಲ್ಲಾ ಸೇರಿಸಿ) | |
| | ಅಂಕಿಯಲ್ಲಿ | ರೂ. |
| | ಅಕ್ಷರಗಳಲ್ಲಿ | ರೂ. |
| 03 | ಮಾಸಿಕ 2500 ಕಿ.ಮೀ.ಗೆ ಮೀರಿದಲ್ಲಿ ಕಿ.ಮೀ. 1ಕ್ಕೆ ನಮೂದಿಸುವ ದರ. ಬಾಡಿಗೆ ಮೊತ್ತವನ್ನು ನಮೂದಿಸುವುದು. (ಇಂಧನ, ದುರಸ್ಥಿ, ನಿಲುಗಡೆ ವೆಚ್ಚ ಎಲ್ಲಾ ಸೇರಿಸಿ) | |

ಟೆಂಡರ್ ಪ್ರಕಟಣೆಯಲ್ಲಿ ತಿಳಿಸಿರುವ ಎಲ್ಲಾ ನಿಬಂಧನೆಗಳಿಗೆ ಒಳಪಟ್ಟು ಟೆಂಡರ್ ಅರ್ಜಿ ಸಲ್ಲಿಸಿರುತ್ತೇನೆ. ಟೆಂಡರನ್ನು ಒಪ್ಪುವುದು/ತಿರಸ್ಕರಿಸುವುದು ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರಿಗೆ ಬಿಟ್ಟಿದ್ದು ಎಂಬುದನ್ನು ತಿಳಿದುಕೊಂಡಿರುತ್ತೇನೆ ಹಾಗೂ ಪ್ರಾಧಿಕಾರದ ಅಂತಿಮ ತೀರ್ಮಾನಕ್ಕೆ ಬದ್ದನಾಗಿರುತ್ತೇನೆ.

**ಸ್ಥಳ:**

**ದಿನಾಂಕ:** **ಅರ್ಜಿದಾರರ ಸಹಿ.**